ಇಂದು ಜಿಕೆವಿಕೆಯಲ್ಲಿ ರೈತ ಸಂತೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿವಿ ವತಿಯಿಂದ ಜಿಕೆವಿಕೆ ಆವರಣದಲ್ಲಿ ಆ.23ರಂದು (ಶನಿವಾರ) ರೈತ ಸಂತೆ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 7 ರಿಂದ ಸಂಜೆ 4ರವರೆಗೆ ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನದ ಬಳಿ ರೈತ ಸಂತೆ ನಡೆಯಲಿದೆ.



ಈ ಬಾರಿ ಸಿರಿಧಾನ್ಯಗಳು, ಬಟರ್ ಫ್ರೂಟ್, ಡ್ರ್ಯಾಗನ್ ಫ್ರೂಟ್, ತಾಜಾ ಅಣಬೆ, ಮೌಲ್ಯವರ್ಧಿತ ಉತ್ಪನ್ನಗಳಿಗೆ ಒತ್ತು ನೀಡಲಾಗುವುದು. ಜತೆಗೆ, ಗುಣಮಟ್ಟದ ರಾಜಮುಡಿ ಅಕ್ಕಿ, ಹಣ್ಣು-ತರಕಾರಿ, ಹೂವು, ಹಲಸು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ, ಜೈವಿಕ ಕೀಟನಾಶಕಗಳೂ ಸೇರಿದಂತೆ ವೈವಿಧ್ಯಮಯ ಉತ್ಪನ್ನಗಳು ರೈತ ಸಂತೆಯಲ್ಲಿ ಸಿಗಲಿವೆ.

V-karnataka pg 05

ರೈತರಿಗೆ ಜೈವಿಕ ಇಂಧನದ ಕುರಿತು ಅರಿವು

• **ಕೋಲಾರ:** ಜೈವಿಕ ಇಂಧನವನ್ನು ಸ್ಥಳೀಯವಾಗಿ ದೊರೆಯುವ ತ್ಯಾಜ್ಯಗಳನ್ನು ಬಳಸಿಕೊಂಡು ಪರಿಸರ ಸ್ನೇಹಿ ಇಂಧನವನ್ನು ತಯಾರಿಸಿ ಬಳಸುವುದರಿಂದ ಹೆಚ್ಚು ಲಾಭದಾಯಕ ಎಂದು ಚಿಂತಾಮಣಿ ರೇಷ್ಮೆ ಕೃಷಿ ಮಹಾವಿದ್ಯಾಲಯದ ಜೈವಿಕ ಇಂಧನ ಘಟಕದ ವೆಂಕಟೇಶ ರೈತರಿಗೆ ಅರಿವು ಮೂಡಿಸಿದರು.

Vijayavani pg 08

ಯೂರಿಯಾ, ಡಿಎಎಪಿ, ಎನ್‌ಪಿಕೆ ಉತ್ಪಾದನೆ ಹೆಚ್ಚಳ, ಆಮದು ಇಳಿಮುಖ

ರಸಗೊಬ್ಬರ ಉತ್ಪಾದನೆ, ಭಾರತ ಸ್ವಾವಲಂಬಿ

ಹೊಸದಿಲ್ಲಿ: ಒಂದು ದಶಕದ ಅವಧಿಯಲ್ಲಿ ಯೂರಿಯಾ ಉತ್ಪಾದನೆಯಲ್ಲಿ ಭಾರತ ಭಾರಿ ಬೆಳವಣಿಗೆ ಸಾಧಿಸಿದೆ. ದೇಶವು 2013-14ರ ಹಣಕಾಸು ವರ್ಷದಲ್ಲಿ 227.15 ಲಕ್ಷ ಮೆಟ್ರಿಕ್ ಟನ್ ಯೂರಿಯಾ ಉತ್ಪಾದಿಸಿದ್ದರೆ, ಇದು 2024-25ರ ಹಣಕಾಸು ವರ್ಷದಲ್ಲಿ 306.67 ಲಕ್ಷ ಮೆಟ್ರಿಕ್ ಟನ್‌ಗೆ ಏರಿದೆ. ಈ ಅವಧಿಯಲ್ಲಿ ಶೇ.35ರಷ್ಟು ಬೆಳವಣಿಗೆ ಸಾಧಿಸಲಾಗಿದೆ ಎಂದು ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ ಶುಕ್ರವಾರ ತಿಳಿಸಿದೆ.

35% ದಶಕದಲ್ಲಿ ಯೂರಿಯಾ ಉತ್ಪಾದನೆ ಹೆಚ್ಚಳ

44% 10 ವರ್ಷದಲ್ಲಿ ಡಿಎಪಿ ಉತ್ಪಾದನೆ ಏರಿಕೆ

ಇದೇ ಅವಧಿಯಲ್ಲಿ ಡಿಎಪಿ ಮತ್ತು ಎನ್‌ಪಿಕೆಎಸ್ ರಸಗೊಬ್ಬರ ಉತ್ಪಾದನೆ ಪ್ರಮಾಣ 110.09 ಲಕ್ಷ ಮೆಟ್ರಿಕ್ ಟನ್ (ಎಲ್‌ಎಂಟಿ) ಇದ್ದುದು, 158.78 ಲಕ್ಷ ಮೆಟ್ರಿಕ್ ಟನ್‌ಗೆ ಜಿಗಿದು, ಶೇ.44ರಷ್ಟು ಏರಿಕೆಯಾಗಿದೆ. ರಸಗೊಬ್ಬರ ವಲಯದಲ್ಲಿ ಆತ್ಮನಿರ್ಭರತೆಯನ್ನು ಸಾಧಿಸಲು ನಮ್ಮ ಸರಕಾರ ನಡೆಸಿದ ಕಾರ್ಯಯೋಜನೆಗಳ ಫಲವಾಗಿದೆ ಎಂದು ಸಚಿವಾಲಯ ಪ್ರತಿಪಾದಿಸಿದೆ. ಜಾಗತಿಕ ಸವಾಲುಗಳ ನಡುವೆಯೂ ಸರಕಾರ ಅಚ್ಚರಿ ಎಂದೆನಿಸುವ ಸ್ಥಿತಿಸ್ಥಾಪಕತ್ವಗುಣವನ್ನು ತೋರಿಸಿದೆ. ಮತ್ತು ದೂರದೃಷ್ಟಿಯನ್ನು ಪ್ರದರ್ಶಿಸಿದೆ.

ಸಮಯೋಚಿತ ರಾಜತಾಂತ್ರಿಕ ಕಾರ್ಯಕ್ರಮಗಳು, ಯೋಜನೆ ಮತ್ತು ಸಂಘಟನಾ ಕಾರ್ಯಗಳಲ್ಲಿ ಸಕಾಲಿಕ ಮಧ್ಯಸ್ಥಿಕೆ, ರೈತರಿಗೆ ಅಗತ್ಯವಾದ ಪ್ರಮಾಣದಲ್ಲಿ ಯೂರಿಯಾ ವಿತರಣೆಯಲ್ಲಿ ನಿರಂತರತೆ ಹಾಗೂ ದಕ್ಷತೆಯನ್ನು ಸಾಧಿಸಲಾಗಿದೆ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಸೌದಿ ಅರೇಬಿಯಾದೊಂದಿಗೆ ಸಂಪರ್ಕ

ಇದಲ್ಲದೆ ವಾರ್ಷಿಕ 31 ಎಲ್‌ಎಂಟಿ ಡಿಎಪಿಯನ್ನು ಭಾರತಕ್ಕೆ ಪೂರೈಸಲು ಸೌದಿ ಅರೇಬಿಯಾ ಮತ್ತು ಭಾರತೀಯ ಕಂಪನಿಗಳ ನಡುವೆ 2025ರಿಂದ ಮುಂದಿನ 5 ವರ್ಷಗಳ ಕಾಲ ದೀರ್ಘಕಾಲೀನ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ದೇಶದ ದೀರ್ಘಕಾಲೀನ ರಸಗೊಬ್ಬರ ಬೇಡಿಕೆ ಹಾಗೂ ರಾಜ್ಯಗಳಿಗೆ ಕಾಲಕ್ಕೆ ಪೂರೈಕೆಯನ್ನು ಖಾತ್ರಿ ಪಡಿಸುವ ಸಲುವಾಗಿ ಈ ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಇದರಿಂದ ಮುಂಗಾರಿನಲ್ಲಿ ರಸಗೊಬ್ಬರ ಲಭ್ಯತೆ ಹೆಚ್ಚಿದೆ. ಕೆಲ ರಾಜ್ಯಗಳಿಗೆ ಮಾತ್ರ ಪೂರೈಕೆ ಸಮಸ್ಯೆಯಾಗಿದೆ.

''ದೇಶೀಯ ರಸಗೊಬ್ಬರ ಉತ್ಪಾದನೆಯಲ್ಲಿ ಏರಿಕೆಯಾಗಿದೆ. ಜಾಗತಿಕ ಕಾರ್ಯತಂತ್ರದ ಸಬಲೀಕರಣವನ್ನು ಸಾಧಿಸಲಾಗಿದೆ.ಇದರಿಂದ ಆಹಾರ ಭದ್ರತೆಯನ್ನು ಇನ್ನಷ್ಟು ಸದೃಢಗೊಳಿಸಲಾಗಿದೆ. ರಾಜ್ಯ ಸರಕಾರಗಳು, ಕೇಂದ್ರಾಡಳಿತ ಜತೆ ಸಮನ್ವಯ ಸಾಧಿಸಿ



227.15 ಲಕ್ಷ ಮೆಟ್ರಿಕ್ ಟನ್: 2013-14ರಲ್ಲಿ ಉತ್ಪಾದನೆಯಾದ ಯೂರಿಯಾ ಪ್ರಮಾಣ

306.67 ಲಕ್ಷ ಮೆಟ್ರಿಕ್ ಟನ್: 2023-24ರಲ್ಲಿ ಉತ್ಪಾದನೆಯಾದ ಯೂರಿಯಾ ಪ್ರಮಾಣ

9.8 ದಶಲಕ್ಷ ಟನ್: 2020-21ರಲ್ಲಿ ಆಮದು ಮಾಡಿಕೊಂಡ ಯೂರಿಯಾ ಪ್ರಮಾಣ

7 ದಶಲಕ್ಷ ಟನ್: 2023-24ರಲ್ಲಿ ಆಮದು ಮಾಡಿಕೊಂಡ ಯೂರಿಯಾ

ಸಾರ್ವಜನಿಕ ಕಂಪನಿಗಳ ಕೊಡುಗೆ

ಸರಕಾರಿ ಸ್ವಾಮ್ಯದ ಹಿಂದೂಸ್ತಾನ್ ಉರ್ವರಾಕ್ ರಸಾಯನ್ ಲಿಮಿಟೆಡ್ (ಎಚ್‌ಯುಆರ್‌ಎಲ್), ಚಂಬಲ್ ಫರ್ಟಿಲೈಸರ್ಸ್, ಮ್ಯಾಟಿಕ್ಸ್ ಫರ್ಟಿಲೈಸರ್ಸ್ ಮತ್ತು ರಾಮಗುಂಡಂ ಫರ್ಟಿಲೈಸರ್ಸ್ ಕೆಮಿಕಲ್ಸ್ ಲಿಮಿಟೆಡ್ (ಆರ್‌ಇಸಿಎಲ್) ಯೂರಿಯಾ ಉತ್ಪಾದನೆಯ ಹೆಚ್ಚಳದಲ್ಲಿ ಗಮನಾರ್ಹ ಕೊಡುಗೆ ನೀಡಿವೆ.

ಸದ್ಯದ ಸ್ಥಿತಿಗತಿ (2025-26)
(ಲಕ್ಷ ಮೆಟ್ರಿಕ್ ಟನ್)

ರಸಗೊಬ್ಬರ	ಬೇಡಿಕೆ	ದಾಸ್ತಾನು
ಯೂರಿಯಾ	143	183
ಡಿಎಪಿ	45	49
ಎನ್‌ಪಿಕೆ	58	97

ಯೂರಿಯಾ ಏಕೆ ಬೇಕು?

ಇದು ಬೆಳೆಗಳಿಗೆ ಅಗತ್ಯವಾದ ನೈಟ್ರೋಜನ್ ಪೂರೈಸಿ ಬೆಳವಣಿಗೆಗೆ ಉತ್ತೇಜನ ನೀಡುತ್ತದೆ. ಯೂರಿಯಾವನ್ನು ಭಾರಿ ಪ್ರಮಾಣದಲ್ಲಿ ಬಳಸಿದರೆ ಕೃಷಿ ಭೂಮಿಯ ಫಲ ಶಕ್ತಿ ಕುಂದುತ್ತದೆ. ಹಾಗೂ ನೀರು ಕಲುಷಿತಗೊಳ್ಳುತ್ತದೆ. ಇತ್ತೀಚೆಗೆ ನೀಮ್ ಕೋಟೆಡ್ ಯೂರಿಯಾ ಹಾಗೂ ಲಿಕ್ವಿಡ್ ನ್ಯಾನೊ ಯೂರಿಯಾವನ್ನು ವ್ಯಾಪಕವಾಗಿ ಬಳಸಲು ರೈತರಿಗೆ ಉತ್ತೇಜನ ನೀಡಲಾಗುತ್ತಿದೆ.

ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಎಚ್ಚರ ವಹಿಸಲಾಗುತ್ತಿದೆ. ಕಾಳಸಂತೆ ಮಾರಾಟ ತಡೆಯಲು ನಿಯಮಿತವಾಗಿ ದಾಳಿ ನಡೆಸಲಾಗುತ್ತಿದೆ,'' ಎಂದು ಸಚಿವಾಲಯ ತಿಳಿಸಿದೆ.

V-karnataka pg 05

Growing significance of trees beyond forests



MOHAN CHANDRA PARGAIEN
FORMER IFS OFFICER & ADVISOR, SCCL TELANGANA

TREES are one of the most efficient and cost-effective carbon sinks, considered a 'silver bullet' solution to climate mitigation. They also provide numerous goods, foods, and services, including habitat and sustenance for a vast array of living creatures.

Plagued with increasing environmental challenges, including climate change, India too is witnessing a growing trend of increased environmental awareness and concern to make the planet earth healthier and sustainable. This is also translating into various proactive actions, among which the tree planting is one of the most favoured ones. India has pledged to create an additional carbon sink of 2.5–3 billion tonnes of CO_2 by increasing its forest and tree cover and restore 26 million hectare (ha) of degraded land by 2030 under the UN Framework Convention on Climate Change (UNFCCC) and the Bonn Challenge, respectively.

Trees Outside Forests (TOF) refer to trees growing outside notified forest areas, including small forests, plantations, and scattered trees along roads, parks, homesteads and agricultural lands on private, community or government lands. This category also encompasses tree patches less than 1 ha in size outside recorded forest areas, known as tree cover.

According to India State of Forest Report (ISFR) 2023, the country's forest and tree cover increased by 1,445 sq km since 2021, of which the increase in forest cover was only 156.4 sq km, having a gain of 149 sq km occurring outside the Recorded Forest. Notably, tree cover growth (1,290 sq km) accounted for 89 per cent of this gain, significantly contributing to the country's green growth. Without this increase in tree cover, the overall growth in forest and tree cover would have been much lower and this is also an indicator of a paradigm shift that forests are no longer confined to wilderness zone but are spreading across urban and rural landscapes alike.

Apart from contributing directly to ecosystem services, more specifically carbon sequestration and biodiversity conservation, TOF also play a vital role in providing supplementary food and livelihood sources for local communities, thereby contributing significantly to rural household economies, food security and environmental conservation.

In developing countries, they are the only wood resources for local people, contributing up to 20 per cent of household income. Agroforestry, playing a major role in agricultural landscapes, is one of the major uses of TOF and provides subsistence to nearly 900 million people in the tropical region.

Despite having exceptional contribution capacity, especially in developing countries, TOF are by and large neglected, overlooked and undervalued forest resources. Much of this neglect is due to their dispersed location, skewed distribution and recognition as a contributor to national progress.

Recognising the exceptional contribution and importance of TOF, the Forest Survey of India for the first time presented the report on TOF in its ISFR-2019, estimating an extent of 29.28 million ha (MHA) under TOF. In the ISFR-2023 report, the extent under TOF is assessed to be 30.29 MHA, constituting 37 per cent of the Tree and Forest Cover of the country.



The tree species constituting the major share of volume under the TOF category are mango (13.25%), neem (7%), mahua (4.27%) and coconut (4.3%). Maharashtra, Rajasthan and Uttar Pradesh have the maximum tree cover, with 14,524, 10,841, and 8,950 sq km, respectively. Various agro-forestry practices in rural landscapes, urban plantations of various forms and extent, including Miyawaki drives, are major areas of increasing TOF. The contribution of Miyawaki to TOF, intending to grow mini forests in urban areas, also cannot be ignored in spite of the fact that these are facing criticism for ignoring local ecology, long-term viability and high raising cost.

In addition, we are also witnessing increasing political sensitivity and priority for environmental conservation, including tree planting, as reflected in the form of recent tree planting drives in the states which have succeeded in involving more and more people and local institutions.

Trees outside forests, with immense ecological and economic value, complement natural forests and align with the International Union of Forest Research Organisations (IUFRO) 2050 vision of 'Forests and Society.'

Their sustainable integration requires landscape-level planning that addresses incentives, land availability, funding and institutional linkages. Recognising and protecting TOF ensures environmental stability, livelihoods, and balanced development for India's sustainable future.

The proactive approach of Government of India led by Prime Minister Narendra Modi, is reflected in its recently released Green India Mission revised guidelines, where due emphasis is given to community-led afforestation primarily outside the notified forests, assisted natural regeneration, and enhanced eco-restoration techniques.

These initiatives are bound to support ecosystem-based climate resilience and interventions besides helping to further improve India's area under TOF in the coming years.

With rapid urbanisation and rising land pressures, a global land squeeze is intensifying, especially in cities. TOF will be vital, offering ecosystem benefits, health improvements and stress relief. Recognising and promoting TOF must become a priority for policymakers and planners to ensure resilient urban futures.

The recent assessment of India's forest cover reveals a concerning 11 per cent increase within Reserved Forest Areas (RFA). This demands serious introspection among policymakers and executives to take corrective actions especially inside RFA besides utilising this as an opportunity to further strengthen existing mechanisms and strategies to improve forest growth outside forests.

India is set to improve green cover outside forests by recognising TOF in Forest Survey of India (FSI) assessments and promoting agro-forestry and other initiatives which is well reflected in the revised Green India Mission guidelines, aiming for sustainable livelihoods and environmental conservation.

In order to achieve India's restoration target of 26 MHA degraded land and also to improve the area under forests, the increasing trend of growth of OTF provides us a golden opportunity, especially for the states having less area under forest, like Punjab, Haryana, Rajasthan, UP, Bihar and concerted efforts and a proactive approach in these directions can help enhance green cover not only outside forests but inside reserved forests too.

With due priority, proper assessment and further development, TOF can become a game-changer to give much solace to the states and countries eagerly waiting to improve their forest cover and benefit their climate and people in the coming years. *(Views are personal)*

Dec Hrd Pg 10

ವಿಜಯವಾಣಿ
ಸಂ ಪಾ ದ ಕೀ ಯ

ತಪ್ಪು ಕಲ್ಪನೆ ನಿವಾರಿಸಿ

ಭಾರತ ಜಗತ್ತಿನ ಅತಿ ದೊಡ್ಡ ಉತ್ಪಾದಕ ರಾಷ್ಟ್ರ. ಒಟ್ಟು ಜಾಗತಿಕ ಉತ್ಪಾದನೆಯ ಸುಮಾರು ಶೇ. 63ರಷ್ಟು ಅಡಕೆಯನ್ನು ನಮ್ಮ ದೇಶದಲ್ಲಿ ಬೆಳೆಯಲಾಗುತ್ತದೆ. ಭಾರತೀಯರಿಗೆ ಅಡಕೆ ಕೇವಲ ತಿನ್ನುವ ವಸ್ತುವಲ್ಲ. ಬದಲಾಗಿ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿಯೂ ಅಡಕೆಗೆ ಮಹತ್ವದ ಸ್ಥಾನ ನೀಡಲಾಗಿದೆ. ಹಾಗಾಗಿ ಇದು ಭಾರತದಲ್ಲಿ ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿ ರೂಪುಗೊಂಡಿದೆ. ದೇಶದ ಹಲವು ಸಮಾಜ- ಸಂಪ್ರದಾಯಗಳಲ್ಲಿ ಅಡಕೆ ಹಾಗೂ ವೀಳ್ಯದೆಲೆ ಹಾಸು ಹೊಕ್ಕಾಗಿದೆ. ಶತಮಾನಗಳಿಂದ ಇದನ್ನು ಆಯುರ್ವೇದ ಮತ್ತು ಪಶುವೈದ್ಯಕೀಯ ಔಷಧಗಳಲ್ಲಿಯೂ ಬಳಸಲಾಗುತ್ತದೆ. ಇಷ್ಟು ಮಹತ್ವವುಳ್ಳ ಅಡಕೆಗೆ ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆಯಾದ ಇಂಟರ್‌ನ್ಯಾಶನಲ್ ಏಜೆನ್ಸಿ ಫಾರ್ ರಿಸರ್ಚ್ ಆನ್ ಕ್ಯಾನ್ಸರ್ (ಐಎಆರ್‌ಸಿ) ಕಳೆದ ವರ್ಷದ ನವೆಂಬರ್‌ನಲ್ಲಿ ಪ್ರಕಟಿಸಿದ ವರದಿಯು 'ಕ್ಯಾನ್ಸರ್‌ಕಾರಕ' ಎಂಬ ಹಣೆಪಟ್ಟಿ ಕಟ್ಟಿತು. ಆ ಮೂಲಕ ಭಾರತದ ಅಡಕೆ ಬೆಳೆಗಾರರನ್ನು ಸಂಕಷ್ಟಕ್ಕೆ ದೂಡಿತು. ಅಡಕೆ ಉದ್ಯಮಕ್ಕೂ ಪೆಟ್ಟು ನೀಡಿತು.



ಅಡಕೆ ವಿರುದ್ಧದ ಅಂತಾರಾಷ್ಟ್ರೀಯ ಹುನ್ನಾರ ಬಯಲಾಗಲಿ

ಅಡಕೆಯಿಂದ ಕ್ಯಾನ್ಸರ್ ಬರುವುದಿಲ್ಲ ಎಂಬುದನ್ನು ನಿರೂಪಿಸಲು ಹಲವು ಪ್ರಯತ್ನಗಳು ದೇಶದಲ್ಲಿ ನಡೆಯುತ್ತಿವೆ. ಇದೇ ಹಿನ್ನೆಲೆಯಲ್ಲಿ ಕರ್ನಾಟಕದ ಸಂಸದರ ನಿಯೋಗ ಗುರುವಾರ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದೆ. ಅಡಕೆ ಕ್ಯಾನ್ಸರ್‌ಕಾರಕವಲ್ಲ ಎಂಬ ಮಾತನ್ನು ಕೇಂದ್ರ ಸಚಿವರೂ ಸ್ಪಷ್ಟಪಡಿಸಿದ್ದಾರೆ. ಈ ವಾದವನ್ನು ಈಗಾಗಲೇ ಭಾರತದ ಹಲವು ತಜ್ಞರು ಮಂಡಿಸಿದ್ದರೂ ವಿಶ್ವ ಆರೋಗ್ಯ ಸಂಸ್ಥೆಗೆ ಸಂಬಂಧಿಸಿದ ವಿಜ್ಞಾನಿಗಳು ಒಪ್ಪಲು ತಯಾರಿಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಡಕೆ ಬಗ್ಗೆ ಈ ರೀತಿಯ ವಿಕ್ಷಿಪ್ತ ವರದಿ ಪ್ರಕಟವಾದುದರ ಹಿಂದೆ ಹಲವು ಪಿತೂರಿಗಳು ಇದ್ದಂತೆ ಕಾಣುತ್ತಿದೆ. ಭಾರತದಲ್ಲಿ ಊಟ-ತಿಂಡಿ ಬಳಿಕ ಎಲೆ ಅಡಕೆ ಜಗಿಯುವುದು ಕೋಟ್ಯಂತರ ಜನರ ಹವ್ಯಾಸ. ಇದನ್ನು ಭಾರತೀಯರಿಂದ ದೂರ ಮಾಡಿದರೆ, ತಾವು ಉತ್ಪಾದಿಸುವ ಸಿಗರೇಟ್ ಮತ್ತಿತರ ಉದ್ಯಮಗಳಿಗೆ ಭಾರತದಲ್ಲಿ ಮಾರುಕಟ್ಟೆ ವಿಸ್ತರಣೆ ಮಾಡಬಹುದು ಎನ್ನುವ ಹುನ್ನಾರ ಪಾಶ್ಚಿಮಾತ್ಯ ದೇಶಗಳಲ್ಲಿ ಇರುವಂತಿದೆ. ಭಾರತದಲ್ಲಿ ಧೂಮಪಾನ ಮಾಡುವವರ ಸಂಖ್ಯೆ ಶೇ.10ರಷ್ಟಿದ್ದು, ಎಲೆ, ಅಡಕೆ, ತಂಬಾಕು ಸೇವಿಸುವವರ ಸಂಖ್ಯೆ ಸುಮಾರು ಶೇ. 18-20ರಷ್ಟಿದೆ. ಅಡಕೆ, ತಂಬಾಕು ತಿನ್ನುವುದು ಕಡಿಮೆಯಾದರೆ ಅಷ್ಟು ಜನ ಧೂಮಪಾನದತ್ತ ಹೊರಳಬಹುದು ಎಂಬುದು ಅವರ ಲೆಕ್ಕಾಚಾರ. ಇದೇ ಕಾರಣಕ್ಕೆ ಪದೇಪದೆ ಅಡಕೆ ಬಗ್ಗೆ ಅಪಪ್ರಚಾರ ಮಾಡುತ್ತಿರುವಂತೆ ಕಂಡುಬರುತ್ತಿದೆ. ಈ ಕಾರಣದಿಂದಾಗಿ ಅಡಕೆ ಬಗೆಗಿನ ತಪ್ಪು ಕಲ್ಪನೆಯನ್ನು ವಿಶ್ವ ಮಟ್ಟದಲ್ಲಿ ಹೋಗಲಾಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಗಂಭೀರ ಪ್ರಯತ್ನ ಮಾಡಬೇಕಿದೆ. ನಿಖರ ಅಧ್ಯಯನ ವರದಿಗಳೊಂದಿಗೆ ಎಲ್ಲ ದೇಶಗಳಿಗೆ ಸಾರಿ ಹೇಳುವ ಅವಶ್ಯಕತೆ ಇದೆ. ಈ ಮೂಲಕ ದೇಶದಲ್ಲಿ ಅಡಕೆ ಬೆಳೆಯನ್ನೇ ನಂಬಿ ಜೀವಿಸುತ್ತಿರುವ ಲಕ್ಷಾಂತರ ಜನರ ಜೀವನಕ್ಕೆ ಮತ್ತಷ್ಟು ಭದ್ರತೆ ಒದಗಿಸಬೇಕಾಗಿದೆ.

Vijayavani Pg 08